# ಬೇಂದ್ರೆಯವರು ಬಂದಿದ್ದರು!

**ನಮ್ಮ ಕಾಲೇಜಿನ ರಜತ ಮಹೋತ್ಸವಕ್ಕೆ ಅತಿಥಿಯಾಗಿ ಬಂದಿದ್ದ ವರಕವಿ ದ.ರಾ. ಬೇಂದ್ರೆ ಅವರನ್ನು ಅತಿ ಸನಿಹದಿಂದ ಕಂಡು ಮಾತನಾಡಿದ್ದು 46 ವರ್ಷಹಳ ಹಿಂದೆ. ಆದರೆ ಅದರ ನೆನಪು ಇನ್ನೂ ಹಸಿರು.**

**ಆರ್.ವಿ. ಭಟ್ಟ, ಬೆಳಗಾವಿ**



ಸಾಹಿತ್ಯ ದಿಗ್ಗಜರೊಂದಿಗೆ ಕಳೆದ ಕೆಲವೇ ಕೆಲವು ಕ್ಷಣಗಳು ಕೂಡ ಜೀವನದಲ್ಲಿ ಅಮೂಲ್ಯವಾಗಿರುತ್ತವೆ. ಹಿರಿಯ ಕವಿ ದ.ರಾ. ಬೇಂದ್ರೆಯವರೊಂದಿಗೆ ಕೆಲ ಸಮಯ ಹತ್ತಿರದಿಂದ ಮಾತನಾಡುವ ಅವಕಾಶ ನನ್ನ ಜೀವನದಲ್ಲೂ ಒದಗಿಬಂದಿತ್ತು. ಅದು ಇಂದಿಗೂ ಸವಿನೆನಪಾಗಿ ಉಳಿದಿದೆ.

ಈ ಸಂದರ್ಭ ಕಳೆದು ಹೋಗಿ ಸುಮಾರು 46 ವರ್ಷಗಳು ಉರುಳಿವೆ. ಆದರೂ ಇದರ ನೆನಪು ಇನ್ನೂ ಹಸಿರಾಗಿದೆ. ಎಷ್ಟು ಕಾಲ ಗತಿಸಿದರೂ ಇಂತಹ ಘಟನೆಗಳನ್ನು ಮರೆಯಲಾಗುವುದಿಲ್ಲ. ಅದು ನಮ್ಮ ಕಾಲೇಜು ದಿನಗಳ ಕಾಲ. ಬೆಳಗಾವಿಯ ರಾಣಿ ಪಾರ್ವತಿದೇವಿ ಕಾಲೇಜು ರಜತ ಮಹೋತ್ಸವ ಆಚರಿಸುತ್ತಿದ್ದ 1970–71ನೇ ವರ್ಷ. ಇಡೀ ವರುಷ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಕನ್ನಡದ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಕಾಲೇಜಿನಲ್ಲಿ 'ಕನ್ನಡ ಸಾಹಿತ್ಯ ಸಂಘ' ಇತ್ತು.

ಪ್ರತಿಯೊಬ್ಬರ ನಾಲಿಗೆಯ ಮೇಲೆ ಹರಿದಾಡುತ್ತಿದ್ದ 'ಇನ್ನೂ ಯಾಕ ಬರಲಿಲ್ಲ ಹುಬ್ಬಳ್ಳಿಯಾಂವ', 'ಇಳಿದು ಬಾ ತಾಯೇ ಇಳಿದು ಬಾ', 'ಕುಣಿಯೋಣ ಬಾರಾ' ಮುಂತಾದ ಹಾಡುಗಳ ಜನಕ ಪದ್ಮಶ್ರೀ ದ.ರಾ. ಬೇಂದ್ರೆ ಕಾಲೇಜಿಗೆ ಬರುತ್ತಾರೆ ಎಂದಕೂಡಲೇ ನಮ್ಮೆಲ್ಲರ ಸಂತೋಷಕ್ಕೆ ಪಾರವೇ ಉಳಿಯಲಿಲ್ಲ. ಮಾತಿನ ಮೋಡಿಗಾರರೆಂದೇ ಹೆಸರಾಗಿದ್ದ ವರಕವಿ ಬೇಂದ್ರೆಯವರು ನಮ್ಮ ಕನ್ನಡ ಸಾಹಿತ್ಯ ಸಂಘಕ್ಕೆ ಭೇಟಿ ಕೊಟ್ಟು ಕೆಲ ಮಾತುಗಳನ್ನು ಆಡಲಿದ್ದಾರೆ ಎಂದು ತಿಳಿದ ಮೇಲಂತೂ ನಾವು ಅತಿ ಹತ್ತಿರದಿಂದ ಅವರನ್ನು ನೋಡುವ ಕೇಳುವ ಸೌಭಾಗ್ಯದ ದಿನಕ್ಕಾಗಿ ಎದುರು ನೋಡುತ್ತಲಿದ್ದೆವು. ಆ ದಿನ 24 ಫೆಬ್ರುವರಿ 1971 ಬಂದೇ ಬಿಟ್ಟಿತು.

ಎಪ್ಪತ್ತೈದು ವಸಂತಗಳನ್ನು ದಾಟಿದ್ದರೂ ಅದೇ ರಾಜಗಾಂಭೀರ್ಯದಿಂದ ಆಗಮಿಸಿದರು ಕರ್ನಾಟಕ ಕುಲತಿಲಕ ಬೇಂದ್ರೆ. ಎಲ್ಲರೊಂದಿಗೆ ಸರಸರ ಮೆಟ್ಟಲೇರುತ್ತ ಪಟಪಟ ಅರಳು ಹುರಿದಂತೆ ಮಾತನಾಡುತ್ತ ಸಭಾಂಗಣಕ್ಕೆ ಬಂದಾಗ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಖುಷಿಯಿಂದ ಪುಳಕಗೊಂಡಿದ್ದರು.

ಈ ಶಬ್ದ ಗಾರುಡಿಗ ಒಂದು ತಾಸಿಗೂ ಮಿಕ್ಕ ತಮ್ಮ ಅಸ್ಖಲಿತ ಕಂಠದಿಂದ ನೆರೆದ ಸಭಿಕರನ್ನು ಬಂಧಿಸಿಯೇ ಇಟ್ಟಿದ್ದರು. ಸಭಾಗೃಹದಿಂದ ಒಬ್ಬರೂ ಅವರ ಭಾಷಣ ಮುಗಿಯುವವರೆಗೆ ಮಿಸುಕಾಡಲಿಲ್ಲ. ಪ್ರತಿಯೊಂದು ಶಬ್ದ ಮತ್ತು ಅದನ್ನು ಹೇಳುವ ರೀತಿಯೇ ನಮ್ಮೆಲ್ಲರನ್ನೂ ಮೂಕವಿಸ್ಮಿತರನ್ನಾಗಿ ಮಾಡಿತ್ತು. ನನ್ನ ಮರಾಠಿ ಭಾಷೆ ನಾನು ನನ್ನ ತಾಯೀ ತೊಡೀಮ್ಯಾಲೆ ಕಲಿತದ್ದು ಎಂದು ಹೇಳಿ ನಡುನಡುವೆ ಕೆಲ ಮರಾಠಿ ಅಣಿಮುತ್ತುಗಳನ್ನು ಸೇರಿಸಿ ಅತ್ಯಂತ ಆಕರ್ಷಕವಾಗಿ ಆಡು ಮಾತುಗಳಲ್ಲಿಯೇ ಸಾಹಿತ್ಯದ ರಸದೌತಣ ಬಡಿಸಿ ಕನ್ನಡ–ಮರಾಠಿ ಎರಡೂ ಭಾಷೆಗಳ ಬಾಂಧವ್ಯ ಮತ್ತು ಹಿರಿಮೆ ಮೆರೆದರು.

ಧ್ಯಾನದ ಬಗ್ಗೆ ಹೇಳುತ್ತ 'ನಮ ಅಂದಾಗ ಮನ ತಲಿ ಕೆಳಗಾಗತದ, ಹೃದಯದ ನೆತ್ತರ ತಲೀ ಕಡಿ ಹರೀತದ' ಎಂದ ಜಗದ ಕವಿ ಸೃಜನಶೀಲತೆಗೆ ಉದಾಹರಣೆಯಾಗಿ 'ಕವಿಜೀವನದ ಬ್ಯಾಸರ ಹರಿಸಾಕೆ, ಹಾಡ ನುಡಿಸಾಕ ಹೆಚ್ಚಿಗೇನು ಬೇಕ? ಒಂದು ಹೂತ ಹುಣಸಿ ಮರ ಸಾಕ' ಎಂದಾಗ ನಮಗೆಲ್ಲ ಕವಿತೆ ಕಟ್ಟುವುದು ಬಹಳ ಸುಲಭ ಎನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಓತಪ್ರೋತವಾಗಿ ಹರಿದ ಮಾತುಗಳು ಅಂಬಿಕಾತನದತ್ತರ 'ಮಾತಿನ ಮೋಡಿಗಾರ' ಎಂಬ ಹೆಸರಿಗೆ ಅನ್ವರ್ಥವಾಗಿತ್ತು. ಅತೀ ಅರ್ಥವತ್ತಾಗಿ ಜೀವನೋತ್ಸಾಹದ ಚಿಲುಮೆಯನ್ನು ಉಕ್ಕಿಸಿದ ಮಾತುಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದ್ದವು. ಅವರ ಪದ್ಯ 'ಹುಸಿನಗುತ ಬಂದೇವ/ ನಸುನಗುತ ಬಾಳೋಣ/ ತುಸು ನಗುತ ತೆರಳೋಣ/ ಬಡನೂರು ವರುಷಾನ/ ಹರುಷದಿ ಕಳೆಯೋಣ/ ಯಾಕಾರೆ ಕೆರಳೋಣ' ಅವರ ಜೀವನ ವ್ಯಾಖ್ಯೆಯಂತೆ ಅನಿಸಿತು. ನಮ್ಮ ಆಡುಭಾಷೆಯ ಸೊಗಡನ್ನು ಬಿಡಿಬಿಡಿಸಿ ಇಟ್ಟ ರೀತಿ ನಮ್ಮನ್ನು ಮೂಕವಿಸ್ಮಿತರನ್ನಾಗಿಸಿತು.

ಅವರ ಭಾಷಣದ ನಂತರ ನಾವು ಕನ್ನಡ ಸಾಹಿತ್ಯ ಸಂಘದ ಪದಾಧಿಕಾರಿಗಳು, ಅಧ್ಯಾಪಕ ವರ್ಗ ಮತ್ತು ಪ್ರಾಚಾರ್ಯರು ವರಕವಿಯೊಂದಿಗೆ ತೆಗೆಸಿಕೊಂಡ ಫೋಟೋ ಇಂದಿಗೂ ಅಂದಿನ ದಿನವನ್ನು ನೆನಪಿಸುವ ಗಣಿಯಾಗಿ ಉಳಿದಿದೆ. ಅಂದಿನ ಕಾಲೇಜಿನ ರಜತ ಮಹೋತ್ಸವದಲ್ಲಿ ವರ್ಷವಿಡೀ ಹಲವಾರು ಕಾರ್ಯಕ್ರಮಗಳು ನಡೆದವು. ಆದರೆ ಎಲ್ಲದಕ್ಕೂ ಕಲಶಪ್ರಾಯವಾಗಿತ್ತು ನಮ್ಮ ಬೇಂದ್ರೆ ಮಾಸ್ತರ ಕಾರ್ಯಕ್ರಮ.